ಟಿ.ಎಂ. ಮಾನಪ್ಪ, ಶಿವಮೊಗ್ಗ
*ಪೊಲೀಸ್ ಭಾಷೆ ಅಂದರೆ ಯಾವುದು?*



ಪೋಲಿಗಳಿಂದ, ಪೋಲಿಗಳಿಗಾಗಿ, ಪೋಲಿಗಳಿಗೋಸ್ಕರ ನಿರ್ಮಿಸಿದ, ಪೋಲಿಗಳೂ ನಾಚುವಂತಹ ವಂಶಾವಳಿ ಸಹಸ್ರನಾಮ.

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಮೊದಲ ರಾತ್ರಿಯಂದೇ ಹೆಣ್ಣು ಮುನಿದರೆ?*
ವೆರಿ ಗುಡ್. ರಮಣಿಯನ್ನು ರಮಿಸಿ ಒಲಿಸಿಕೊಳ್ಳುವುದೇ ರಮ್ಯಾತಿರಮ್ಯ.

ರಮೇಶ. ಜ. ಬೊಂಗಾಳೆ, ಬೈಲಹೊಂಗಲ
*ಹೆಣ್ಣು ಗಂಡನ ಮನೆಗೆ ಹೋಗುವಾಗ ದುಃಖಿಸುವುದು ಯಾಕೆ ಸಾರ್?*
ಅಪ್ಪನ ಕೈಯಡಿಗೆ ತಪ್ಪಿ, ಹೊಸದಾಗಿ ಅಡಿಗೆ ಕಲಿಯಲಿರುವ ಗಂಡನ ಕೈಯಡಿಗೆ ತಿನ್ನಬೇಕಲ್ಲಾ ಎಂದು!

ಆರ್. ನಾಗರಾಜ್, ಗೊರೂರು
*ಮದುವೆಯಾಗದ ಗಂಡು ಬ್ರಹ್ಮಚಾರಿ. ಮದುವೆಯಾಗದ ಹೆಣ್ಣು?*
ಆ ಬ್ರಹ್ಮಚಾರಿಯ ಖೆಡ್ಡಾ!

ಕುಮಾರ ಚಲವಾದಿ, ಹೊಳೆನರಸಿಪುರ
*ನಲ್ಲಿ ನೀರಿಗೆ ಮೀಟರ್ ಇಡುವಂತೆ, ಸಾರಾಯಿಗೂ ಮೀಟರ್ ಇಟ್ಟು ನಲ್ಲಿ ಜೋಡಿಸಿದರೆ?*



ಗಣೇಶ್

ವಾಹ್! ಮಂಚದ ತಲೆದೆಸೆಯಲ್ಲೇ ನಲ್ಲಿ ಹಾಕಿಸಿಬಿಟ್ಟರೆ ಕುಡಿದು ಬೀಳುವ ಬದಲು ಬಿದ್ದಿದ್ದಲ್ಲೇ ಕುಡಿಯುವ ಯೋಗ!

ಬೆಟ್ಟಹಳ್ಳಿ ಗೋಪಿನಾಥ್, ಸೂಲಿಬೆಲೆ
*ಪಂಚಪಾಂಡವರಿಗೆ ಒಬ್ಬಳನ್ನೇ ವರಿಸುವ ಆಸೆ ಏಕಾಯಿತು ಮಹಾಪ್ರಭು?*
ಅದು 1 ವರ್ಷ ಮದುವೆಯ ಸುಖಕ್ಕೆ 4 ವರ್ಷದ ಬ್ಯಾಚಲರ್‌ಹುಡ್‌ನ ಸ್ವಾತಂತ್ರ್ಯ ಹೊಂದಲು ಹೂಡಿದ ಉಪಾಯ!

ಎಚ್.ಎಸ್. ರಾಘವೇಂದ್ರ, ಬೆಂಗಳೂರು
*ನಿರುದ್ಯೋಗಿಗಳಿಗೂ ಒಂದು ರೂ ಅಕ್ಕಿ ಯೋಜನೆ ವಿಸ್ತರಿಸಿದರೆ ಹೇಗೆ?*
ಹ್ಹ! ಒಂದು ರೂಗೆ ಅಕ್ಕಿ ಪಡೆಯುತ್ತಿರುವವರು ನಿರುದ್ಯೋಗಿಗಳೇ– ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದ್ದಾರಲ್ಲಾ!

ಆರ್. ಮಧುಸೂದನ್, ಹಾಸನ
*ಗಂಡಸರಿಗೆ ಉದುರುವಷ್ಟು ತಲೆಕೂದಲು ಹೆಂಗಸರಿಗೆ ಉದುರುವುದಿಲ್ಲ. ಏಕೆ?*
ಏಕೆಂದರೆ ಗಂಡಸರು ಹೆಂಗಸರಷ್ಟು ಮೆದುಳಿಗೆ ಕೈ ಹಾಕುವುದಿಲ್ಲ!

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
*ಬದುಕು ಜಟಕಾ ಬಂಡಿ ಎನ್ನುತ್ತಾರೆ. ಬಸ್ಸು, ವಿಮಾನ, ಬೈಕು ಎಂದು ಏಕೆ ಹೇಳುವುದಿಲ್ಲ?*
ಅದು ಜಟಕಾವೇ ಆಗಿರುವುದರಿಂದ; ಜ – ಜನ್ಮ; ಟ– ಟವಟವಿಸುವಿಕೆ; ಕಾ – ಕಾಲವಾಗುವಿಕೆ!

ಆರತಿ ಘಟಿಕಾರ್, ದುಬೈ
*ಮುಂದಿನ 7 ಜನ್ಮಕ್ಕೂ ನೀವೇ ನನ್ನ ಪತಿಯಾಗಬೇಕೆಂದರೆ ಇವರು ಇದೇ ನನ್ನ 7ನೇ ಜನ್ಮವೆಂದರು. ಇದನ್ನು ದೃಢಪಡಿಸುವುದು ಹೇಗೆ?*
ನಿಮ್ಮ ಹೆಸರಲ್ಲೇ ಇದೆಯಲ್ಲ; ಎಲ್ಲಾ ಮುಗಿದಮೇಲೆಯೇ ಆರತಿ.

ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ
*ಒಬ್ಬರಿಗೆ ಹೆಂಡತಿ ಪ್ರಾಣ ಹಿಂಡುತಿ; ಇನ್ನೊಬ್ಬರಿಗೆ ಹೆಂಡತಿ ಮನೆಯೊಳಗಿದ್ದರೆ ಕೋಟಿ ರೂಪಾಯಿ; ನಿಮಗೆ?*
ನನ್ನ ಬೋಡು ಮಾಡಿಸಿಕೊಂಡ ತಲೆಯನ್ನು ಸವರುತ್ತಾ 'ಪದ್ಮಾವತಿಪತಿ ತಿರುಪತಿ....' ಎನ್ನುತ್ತಾ ರಾಗವಾಗಿ ಹಂಗಿಸುವವಳು.

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಅಲ್ರಪ್ಪೋ, ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದರೆ ಏನಾಗುತ್ತೆ?*
ಕಡುಬಿನೊಳಗಿನ ಹೂರಣ ತೆಗೆದು ಕಡುಬಿನ ಹೊರಮೈ ಉಳಿಸಿ ಪೈಪ್ ತರಹ ಬಳಸಿ ನೀರಿಳಿಸಲು ಅನುಕೂಲವಾಗುತ್ತೆ.

ನಾಗವೇಣಿ ಸೋಮಶೇಖರ್, ಮೈಸೂರು
*ಗೃಹಪ್ರವೇಶದಲ್ಲಿ ಹಾಲು ಉಕ್ಕಿಸುತ್ತಾರೆ. ಆದರೆ ದಿನದಲ್ಲಿ ಹಾಲು ಉಕ್ಕಿಸಿದರೆ ಬೈಯುವುದೇಕೆ?*
ಪಾಪ! ಯಜಮಾನರೇ ಒಲೆ, ಪಾತ್ರೆ, ಕಟ್ಟೆಗಳನ್ನು ಕ್ಲೀನ್ ಮಾಡಬೇಕಲ್ಲ!

## ಬಹುಮಾನಿತ ಪ್ರಶ್ನೆ

ಎಚ್.ಆರ್. ದೇಸಾಯಿ, ರಾಯಚೂರು
*ಓಲ್ಡ್ ಈಸ್ ಗೋಲ್ಡ್ ಎನ್ನುತ್ತಾರೆ. ಆದರೆ ಮನೆಯಲ್ಲಿರುವ ಓಲ್ಡ್ ಆದವರನ್ನು ಗೋಲ್ಡ್‌ನಂತೆ ನೋಡಿಕೊಳ್ಳುವುದಿಲ್ಲವಲ್ಲ?*
ನೋಡಿಕೊಳ್ಳುವರಲ್ಲ! ಚಿನ್ನವನ್ನು ಮರೆಯಲ್ಲಿರಿಸಿ, ಎಂದೋ ಒಮ್ಮೆ ಹೊರತೆರೆದು ಪಾಲಿಶ್ ಹಾಕಿಸುತ್ತಾರೆ. ವೃದ್ಧರನ್ನೂ ಅಷ್ಟೆ!

ಡೈರಿ ವಿಶ್ವನಾಥ್, ಬೆಂಗಳೂರು
*ಹಣತೆಯ ಮಹತ್ವವೇನು?*
ಎಣ್ಣೆ ಹಾಕಿ, ಬತ್ತಿ ಇಡುವ ಜನರಿಗೂ ಸ್ವಚ್ಛವಾದ ಬೆಳಕು ನೀಡುತ್ತದೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ತುಂಬಿದ ಕೊಡ ತುಳುಕಾಡುವುದು ಯಾವಾಗ?*
ಬಳುಕಾಡುವ ಸೊಂಟ ಏರಿದಾಗ.

ಕೆ.ವಿ.ಶಿವಕುಮಾರ್ ಕಾಳೀಹುಂಡಿ, ಮೈಸೂರು
*ಕಾಡುಪ್ರಾಣಿಗಳು ಈಗ ನಗರಪ್ರದೇಶಗಳಲ್ಲಿ ವಾಸಿಸುವುದನ್ನು ರೂಢಿ ಮಾಡಿಕೊಂಡಿವೆಯಲ್ಲಾ...?*



ಊಹೂಂ. ಅವು ಇದ್ದಲ್ಲಿಯೇ ಇವೆ; ನಗರಗಳೇ ಕಾಡಿನವರೆಗೆ ಹರಡಿವೆ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ನಾವು ಭೇಟಿ ಕೊಡುವ ಪ್ರತಿಯೊಂದು ದೇವಾಲಯದ ಅರ್ಚಕರೂ ತಮ್ಮ ದೇವರೇ ಶ್ರೇಷ್ಠವೆಂದು ಹೇಳುವರಲ್ಲಾ, ಇದು ಸರಿಯೆ?*
ಸರಿಯೇ; ಭಕ್ತಿ ಮಾರಾಟದ ಸರಕು; ಅರ್ಚಕ ಅಡ್ವರ್ಟೈಸಿಂಗ್ ಏಜೆಂಟ್!

ಅಮರಯ್ಯಾ ಪತ್ರಿಮಠ, ಸುರಪೂರ
*ಪ್ರಪಂಚದಲ್ಲಿ ಹಣಕ್ಕೆ ದೊರಕದ ವಸ್ತು ಯಾವುದು?*
ಓಝೋನ್ ಪದರ.

ಎಸ್.ಜಿ. ಕರನಂದಿ, ಹುನಗುಂದ
*ಮಕ್ಕಳಿಗೂ, ವಿದ್ಯುತ್ ಬಲ್ಬ್‌ಗಳಿಗೂ ಏನು ವ್ಯತ್ಯಾಸ?*
ಪ್ರಕಾಶಿಸುವುದಕ್ಕೆ ಒಂದಕ್ಕೆ ಬೇಕಾದ್ದು, ವಿದ್ಯುತ್ತು, ಇನ್ನೊಂದಕ್ಕೆ ವಿದ್ವತ್ತು!

■ ರಾಮ್